ಕಳುಹಿಸಿಕೊಡಲಾಗುವುದು. ಇಷ್ಟೇ ಹೊರತು, ಕೇಂದ್ರ ಸರ್ಕಾರ ಇನ್ನೂ ಯಾವುದೇ ಯೋಜನೆಗಳನ್ನು ಈ ಬಗ್ಗೆ ಪ್ರಾರಂಭಿಸಿರುವುದರ ಮಾಹಿತಿ ರಾಜ್ಯ ಸರ್ಕಾರಕ್ಕೆ ಬಂದಿರುವುದಿಲ್ಲ.

ಅ) 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 'ಆ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ: ಕೋಲಾರ ಜಿಲ್ಲೆಯಲ್ಲಿ ಟ್ರೈಸೆಂ ಯೋಜನಾ ಅಡಿಯಲ್ಲಿ ತೆರೆಯಲಾದ ಕೈಗಾರಿಕಾ ಘಟಕಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1369 (2037)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ (ಡಿಸೆಂಬರ್-91ರವರೆಗೆ) (ಟ್ರೈಸಂ)ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿದೆ(ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಇವುಗಳಿಗೆ ತಗುಲಿದ ವೆಚ್ಚವೆಷ್ಟು ?

ಇ) ಈ ಯೋಜನೆಯಿಂದ ಎಷ್ಟು ಜನರಿಗೆ ಅನುಕೂಲವಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ(ಡಿಸೆಂಬರ್91ರವರೆಗೆ)(ಟ್ರೈಸಂ) ಯೋಜನೆಯಡಿಯಲ್ಲಿ 874 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ
1) ಕೋಲಾರ	81
2) ಮಾಲೂರು	65
3) ಮುಳಬಾಗಿಲು	86
4) ಬಂಗಾರಪೇಟೆ	93
5) ಶ್ರೀನಿವಾಸಪುರ	79
6) ಗೌರಿಬಿದನೂರು	86
7) ಚಿಕ್ಕಬಳ್ಳಾಪುರ	76
8) ಗುಡಿಬಂಡೆ	53
9) ಸಿಡ್ಲಘಟ್ಟ	103
10) ಚಿಂತಾಮಣಿ	72
11) ಬಾಗೆಪಲ್ಲಿ	80
ಒಟ್ಟು	874

ಆ) ಇವುಗಳಿಗೆ ತಗುಲಿದ ವೆಚ್ಚ ರೂ. 15,29,122-00

ಇ) ಈ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲೆಯಲ್ಲಿ 1837ಜನರಿಗೆ ಅನುಕೂಲವಾಗಿದೆ. ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ:

ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ
1) ಕೋಲಾರ	159
2) ಮಾಲೂರು	93
3) ಮುಳಬಾಗಿಲು	160
4) ಬಂಗಾರಪೇಟೆ	131
5) ಶ್ರೀನಿವಾಸಪುರ	133
6) ಗೌರಿಬಿದನೂರು	199
7) ಚಿಕ್ಕಬಳ್ಳಾಪುರ	203
8) ಗುಡಿಬಂಡೆ	130
9) ಶಿಡ್ಲಘಟ್ಟ	201
10)ಚಿಂತಾಮಣಿ	116
11)ಬಾಗೇಪಲ್ಲಿ	311
ಒಟ್ಟು	1837

ವಿಷಯ: ಸರಕಾರಿ ಹಾಗೂ ಖಾಸಗಿ ಐ.ಟಿ.ಐ ಕಾಲೇಜುಗಳ ಮಾಹಿತಿ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1372 (2030)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು ಇದೆ.

ಆ) ಜಿಲ್ಲಾವಾರು ಕಾಲೇಜುಗಳ ಹೆಸರು ಮತ್ತು ವಿವರ ಕೊಡುವುದು.

ಇ) ರಾಜ್ಯದಲ್ಲಿರುವ ಖಾಸಗಿ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು ;

ಈ) ಸದರಿ ಖಾಸಗಿ ಐ.ಟಿ.ಐ ಕಾಲೇಜುಗಳಿಗೆ ಸರ್ಕಾರದಿಂದ ಅನುದಾನ ಕೊಡಲಾಗುವುದೆ ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)

ಅ) 39

ಆ) ಜಿಲ್ಲಾವಾರು ವಿವರ ಅನುಬಂದದಲ್ಲಿ ಕೊಡಲಾಗಿದೆ.

ಇ) 141

ಈ) ಅನುದಾನ ನೀಡುವ ಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅನುಬಂಧ

ಜಿಲ್ಲಾವಾರು ಕೈಗಾರಿಕಾ ತರಬೇತಿ ಸಂಸ್ಥೆ : ಕೇಂದ್ರ ವಲಯ